# ಮಂಗಳೂರು ವಿಶ್ವವಿದ್ಯಾನಿಲಯ

(Accredited by NAAC with 'A' Grade)

ಸಂಖ್ಯೆ: ಮಂವಿವಿ/ಎಸ್‌ಸಿಟಿಸೆಲ್/ಭಾ.ಸ.ವಿ.ವೇ./2020-21/ಎಸ್‌ಸಿಟಿ1

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ - 574 199
ದಿನಾಂಕ: 19.02.2021

## ಸುತ್ತೋಲೆ

ಮಾನ್ಯರೇ,

**ವಿಷಯ:** 2020-21ನೇ ಸಾಲಿಗೆ ಸ್ನಾತಕೋತ್ತರ ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ S.S.P (State Scholarship Portal) ನಲ್ಲಿ ಕಡ್ಡಾಯವಾಗಿ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** ವೆಬ್‌ಸೈಟ್ ಮಾಹಿತಿ (SSP Portal).

*********

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖದ ಮಾಹಿತಿಯನ್ವಯ 2020-21ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (State Scholarship Portal)ನಲ್ಲಿ ಕಡ್ಡಾಯವಾಗಿ (https://ssp.postamatric.karnataka.gov.in) ಅರ್ಜಿಯನ್ನು ದಿನಾಂಕ:15.03.2021ರೊಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

**ಸೂಚನೆಗಳು:-**

1. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ಸೂಚನೆಗಳನ್ನು ಕಡ್ಡಾಯವಾಗಿ ಓದಿಕೊಳ್ಳತಕ್ಕದ್ದು.ವಿದ್ಯಾರ್ಥಿಗಳುಯು.ಆರ್.ಎಲ್http://ssp.postmatric.karnataka.gov.in ಮೂಲಕ ವೈಯಕ್ತಿಕ ಖಾತೆ (login Id) ಸೃಜಿಸಿದ ನಂತರ ಅರ್ಜಿ ಸಲ್ಲಿಸಬೇಕಾಗುತ್ತದೆ.
2. ರೂ.2.50 ಲಕ್ಷಕ್ಕಿಂತ ಕಡಿಮೆ ಕುಟುಂಬದ/ಪೋಷಕರ ವಾರ್ಷಿಕ ಆದಾಯ ಇರುವ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳು ಕಡ್ಡಾಯವಾಗಿ ಅರ್ಜಿಗಳನ್ನು ಸಲ್ಲಿಸುವುದು.
3. Online ಅರ್ಜಿಯನ್ನು ಯಶಸ್ವಿಯಾಗಿ ಭರ್ತಿ ಮಾಡಿ print-out ತೆಗೆದುಕೊಂಡು ಅದರೊಂದಿಗೆ ಈ ಕೆಳಗೆ ನಮೂದಿಸಿದ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಲಗತ್ತಿಸಿ, ಒಂದು ಪ್ರತಿಯನ್ನು ವಿಭಾಗದ ಮುಖ್ಯಸ್ಥರುಗಳ ಮುಖಾಂತರ ಈ ಕಛೇರಿಗೆ ರವಾನಿಸಬೇಕು: (ವಿದ್ಯಾರ್ಥಿಗಳು ಸದರಿ ಅರ್ಜಿ ಮತ್ತು ದಾಖಲಾತಿಗಳ ಒಂದು ಪ್ರತಿಯನ್ನು ತಮ್ಮೊಡನೆ ಇರಿಸಿಕೊಳ್ಳುವುದು).
    1. ವಿದ್ಯಾರ್ಥಿಯ ಆಧಾರ್ ಕಾರ್ಡ್ ಪ್ರತಿ
    2. ಹಿಂದಿನ ವರ್ಷದ ಅಂಕಪಟ್ಟಿ/ಉತ್ತೀರ್ಣ ಪ್ರಮಾಣ ಪತ್ರ (Pass certificate)/ವಿಭಾಗದ ಅಧ್ಯಕ್ಷರ/ಪ್ರಾಂಶುಪಾಲರಿಂದ ಪಡೆದ Study/bonafide certificate.
    3. ಜಾತಿ ಪ್ರಮಾಣ ಪತ್ರ (ಕಡ್ಡಾಯವಾಗಿ RD ನಂಬರ್ ಹೊಂದಿರುವ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸುವುದು EX:RD003xxxxxxxx)
    4. ಆದಾಯ ಪ್ರಮಾಣ ಪತ್ರ (ಕಡ್ಡಾಯವಾಗಿ RD ನಂಬರ್ ಹೊಂದಿರುವ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸುವುದು EX:RD003xxxxxxxxx)
    5. ಹಾಸ್ಟೆಲ್ HMIS ID (ನಿಲಯ ಪಾಲಕರಿಂದ ಪಡೆಯಬೇಕು)
    6. ಶುಲ್ಕ ಪಾವತಿಸಿದ ಬಗ್ಗೆ ರಶೀದಿ ಚಲನ್ ಪ್ರತಿ
    7. ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ (ಬ್ಯಾಂಕ್ ಖಾತೆ ವಿದ್ಯಾರ್ಥಿಗಳ ಹೆಸರಿನಲ್ಲಿ ಇರಬೇಕು ಹಾಗೂ ಖಾತೆ ಚಾಲ್ತಿಯಲ್ಲಿರಬೇಕು) ಬ್ಯಾಂಕ್ ಖಾತೆ ವಿದ್ಯಾರ್ಥಿಯ ಮೊಬೈಲ್ ನಂಬರಿಗೆ link ಆಗಿರಬೇಕು
    8. ವಿದ್ಯಾರ್ಥಿಗಳ ಹೆತ್ತವರು/ಪೋಷಕರು ಸರಕಾರಿ/ಅರೆಸರಕಾರಿ/ಖಾಸಗಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅರ್ಜಿ ಸಲ್ಲಿಸುವಾಗಿನ ಕೊನೆಯ ತಿಂಗಳ ವೇತನ ದೃಢಪತ್ರ ಸಲ್ಲಿಸುವುದು
    9. ಹೆತ್ತವರ/ಪೋಷಕರ ಆಧಾರ ಸಂಖ್ಯೆಯನ್ನು ನಮೂದಿಸಬೇಕು.

ಮು.ಪಿ.ನೋ..

4. ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ **ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳು 15.03.2021ರೊಳಗೆ** Online ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಮುಗಿಸಬೇಕೆಂದು ಸೂಚಿಸಲಾಗಿದೆ. ವಿಭಾಗ ಮುಖ್ಯಸ್ಥರುಗಳು/ಸಂಯೋಜಕರುಗಳು ಸಂಬಂಧಿಸಿದ **ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಅರ್ಜಿಯನ್ನು** 25.03.2021ರೊಳಗೆ ಅರ್ಜಿಗಳನ್ನು ಕ್ರೋಢೀಕರಿಸಿ ಸೂಕ್ತ ತಃಖ್ತೆಯೊಂದಿಗೆ ಮೂಲ ಹಾಗೂ ಜೆರಾಕ್ಸ್ ಅರ್ಜಿ ಪ್ರತಿಯನ್ನು ಅಡಕಗಳೊಂದಿಗೆ ಈ ಕಛೇರಿಗೆ ಸಲ್ಲಿಸುವ ವ್ಯವಸ್ಥೆ ಮಾಡಬೇಕೆಂದು ಸೂಚಿಸಲಾಗಿದೆ.

5. **ಯಾವುದೇ ಕಾರಣಕ್ಕಾಗಿಯೂ ನಿಗದಿಪಡಿಸಿರುವ ದಿನಾಂಕದೊಳಗೆ ಸಮರ್ಪಕವಾದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸದಿದ್ದಲ್ಲಿ ಅದಕ್ಕೆ ವಿದ್ಯಾರ್ಥಿಗಳೇ ಜವಾಬ್ದಾರರಾಗುತ್ತಾರೆ. ಅಂತಹ ಸಂದರ್ಭಗಳಲ್ಲಿ ಈ ಶೈಕ್ಷಣಿಕ ವರ್ಷದ ಪ್ರವೇಶಾತಿ ಸಂದರ್ಭದಲ್ಲಿ ನೀಡಿದ ಮುಚ್ಚಳಿಕೆ ಪತ್ರದ ಪ್ರಕಾರ ಪಡೆದುಕೊಂಡಿರುವ ವಿವಿಧ ಶುಲ್ಕಗಳ ವಿನಾಯಿತಿ ಮತ್ತು ಹಾಸ್ಟೆಲ್ ನಿರ್ವಹಣಾ ವೆಚ್ಚಗಳನ್ನು ತಾವೇ ಸ್ವತಃ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗುತ್ತದೆ.**

**ಆದುದರಿಂದ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.2.50 ಲಕ್ಷದೊಳಗಿನ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ಎಲ್ಲಾ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳು ತಪ್ಪದೇ ವಿದ್ಯಾರ್ಥಿವೇತನಕ್ಕೆ ಕಡ್ಡಾಯವಾಗಿ ಅರ್ಜಿ ಸಲ್ಲಿಸುವಂತೆ ಖಾತರಿ ಪಡಿಸಿಕೊಳ್ಳಲು ವಿಭಾಗಗಳ ಮುಖ್ಯಸ್ಥರುಗಳನ್ನು ಕೋರಲಾಗಿದೆ.**

ತಮ್ಮ ವಿಶ್ವಾಸಿ,

ಕುಲಸಚಿವರ ಪರವಾಗಿ

ರಿಗೆ,

ಅಧ್ಯಕ್ಷರು/ಸಂಯೋಜಕರುಗಳು
ಎಲ್ಲಾ ಸ್ನಾತಕೋತ್ತರ ವಿಭಾಗಗಳು/ಕೋರ್ಸುಗಳು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ.

**ಪ್ರತಿ:**

1. ಸಹಾಯಕ ನಿರ್ದೇಶಕರು (ಗ್ರೇಡ್– I), ಸಮಾಜ ಕಲ್ಯಾಣ ಇಲಾಖೆ, ಮಂಗಳೂರು ತಾಲೂಕು, ರಸಿಕ್ ಚೇಂಬರ್, 3ನೇ ಮಹಡಿ, ಸೆಂಟ್ರಲ್ ಮಾರ್ಕೆಟ್ ರೋಡ್, ಮಂಗಳೂರು – 575001
2. ನಿರ್ದೇಶಕರು, ಗಣಕ ಯಂತ್ರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ – ಸದರಿ ಮಾಹಿತಿಯನ್ನು ವಿಶ್ವವಿದ್ಯಾನಿಲಯದ **ವೆಬ್‌ಸೈಟ್‌ನಲ್ಲಿ ಅಳವಡಿಸಲು ಕೋರಲಾಗಿದೆ.**
3. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕಿ, ಮಂಗಳೂರು ವಿಶ್ವವಿದ್ಯಾನಿಲಯ, ಇವರಿಗೆ ಮಾಹಿತಿಗಾಗಿ.
4. ನಿಲಯ ಪಾಲಕರು, ಪುರುಷರ/ಮಹಿಳೆಯರ ವಸತಿನಿಲಯ, ಮಂಗಳೂರು ವಿಶ್ವವಿದ್ಯಾನಿಲಯ ಆವರಣ ಮಂಗಳಗಂಗೋತ್ರಿ.